



ಅರುಣ ಪಿ. ಭಟ್ಟ

## ವಾರಭವಿಷ್ಯ 22.10.2020ರಿಂದ 28.10.2020ರವರೆಗೆ




ಕೌಟುಂಬಿಕ ವ್ಯವಹಾರಗಳನ್ನು ನಡೆಸುತ್ತಿರುವವರು ಸೋದರರ ಜತೆ ಚರ್ಚೆ ನಡೆಸಲಿದ್ದೀರಿ. ನಿಮ್ಮ ಸಾಮಾಜಿಕ ಹಾಗೂ ರಾಜಕೀಯ ಬದುಕು ವೃದ್ಧಿಯಾಗುತ್ತಾ ಸಾಗುತ್ತದೆ. ದೈಹಿಕವಾಗಿ ಆಯಾಸ ಅನುಭವಕ್ಕೆ ಬರಲಿದೆ. ಉಸಿರಾಟದ ಸಮಸ್ಯೆ ಹಾಗೂ ರಕ್ತದೊತ್ತಡದ ಸಮಸ್ಯೆ ಕೂಡ ನಿಮ್ಮನ್ನು ಕಾಡಬಹುದು. ಆದ್ದರಿಂದ ವೈದ್ಯರ ಬಳಿ ಚಿಕಿತ್ಸೆ ಪಡೆದುಕೊಳ್ಳಿ. ಶುಭದಿನ 25. ಸೌಂದರ್ಯ ಲಹರಿ ಪಠಿಸಿರಿ.




ವ್ಯಾಪಾರದ ಸಲುವಾಗಿ ಪ್ರಯಾಣ ಮಾಡಬೇಕಾಗುತ್ತದೆ. ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರುಗಳು ಕಾಣಿಸಿಕೊಳ್ಳಬಹುದು. ವಾರದ ಮಧ್ಯ ಭಾಗದಲ್ಲಿ ಪಾರ್ಟಿಗಳಲ್ಲಿ ಹೆಚ್ಚು ಭಾಗವಹಿಸುವ ಸಾಧ್ಯತೆಗಳಿವೆ. ರಾಜಕಾರಣಿಗಳಿಗೆ ದೊಡ್ಡ ಮಟ್ಟದಲ್ಲಿ ಪ್ರಗತಿ ಆಗಬಹುದು. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿ ಜತೆಗೆ ಉದ್ವಿಗ್ನ ವಾತಾವರಣ ಇರುತ್ತದೆ. ಹಣಕಾಸು ಸ್ಥಿತಿ ಕೂಡ ಚೆನ್ನಾಗಿರುತ್ತದೆ. ಶುಭದಿನ 27. ಶಿವಕವಚ ಪಠಿಸಿರಿ.




ಸಮಾಜದಲ್ಲಿ ಅತ್ಯುತ್ತಮ ವ್ಯಕ್ತಿಯಾಗಿ ನಿಮ್ಮ ಪ್ರಭಾವಳಿ ಬೆಳೆಯುತ್ತದೆ. ಈ ಹಿಂದೆ ನೀವು ಹಾಕಿದ ಶ್ರಮಕ್ಕೆ ಉತ್ತಮ ಪ್ರತಿಫಲ ದೊರೆಯಲಿದೆ. ಕ್ರೀಡೆ ಹಾಗೂ ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮುಂದುವರಿಸಲಿದ್ದೀರಿ. ಆರೋಗ್ಯದಲ್ಲಿ ಸಮಸ್ಯೆಯಾಗಿ, ಆಸ್ಪತ್ರೆಗೆ ದಾಖಲಾಗಬೇಕಾದ ಸ್ಥಿತಿ ನಿರ್ಮಾಣ ಆಗುತ್ತದೆ. ವೈಯಕ್ತಿಕ ಜೀವನದಲ್ಲಿ ಬಹಳ ಕಿರಿಕಿರಿ ಅನುಭವಿಸುತ್ತಿರಿ. ಶುಭದಿನ 28. ಕಾಲಭೈರವನ ಸೇವೆ ಮಾಡಿರಿ.




ಅಂದುಕೊಂಡ ವೇಗದಲ್ಲಿ ಸಂಪತ್ತು ವೃದ್ಧಿ ಆಗುತ್ತಿಲ್ಲ ಎಂದು ಚಿಂತೆ ಮಾಡುತ್ತೀರಿ. ಅವಧಿಯಲ್ಲಿ ನಿಮಗೆ ಜನ ಬೆಂಬಲ ಸಿಗುತ್ತದೆ. ನಿಮ್ಮ ವಿಶ್ವಾಸಾರ್ಹತೆಯನ್ನು ನಾಶ ಮಾಡುವುದಕ್ಕೆ ವಿರೋಧಿ ಪಾಳಯದವರು ನಿರಂತರವಾಗಿ ಪ್ರಯತ್ನ ಪಡುತ್ತಾರೆ. ವಾರದ ಮಧ್ಯ ಭಾಗದಲ್ಲಿ ನಿಮ್ಮ ಪಾಲಿನ ಗ್ರಹಗತಿ ಸ್ವಲ್ಪ ಮಟ್ಟಿಗೆ ಸಕಾರಾತ್ಮಕವಾಗಿದೆ. ಶುಭದಿನ 23. ಚಂಡಿ ಪಾರಾಯಣ ಮಾಡಿರಿ.




ಸ್ವಂತ ವ್ಯಾಪಾರ ನಡೆಸುತ್ತಿರುವವರು ಸಿಬ್ಬಂದಿ ನೇಮಕಾತಿಗೆ ಮನಸ್ಸು ಮಾಡುತ್ತೀರಿ. ಈ ಅವಧಿಯಲ್ಲಿ ನೀವು ಹಾಕಿದ ಶ್ರಮಕ್ಕೆ ಯಶಸ್ಸು ದೊರೆಯಲಿದೆ. ಮಕ್ಕಳು ತುಂಬ ಸಂತೋಷವಾಗಿರುತ್ತಾರೆ. ವಾರದ ಮಧ್ಯ ಭಾಗದಲ್ಲಿ ಇತರರು ನಿಮಗೆ ತೊಂದರೆ ನೀಡುತ್ತಾರೆ. ಅವರಿಂದ ವ್ಯಾಪಾರ ವ್ಯವಹಾರದಲ್ಲಿ ನೀವು ನಷ್ಟ ಅನುಭವಿಸಲಿದ್ದೀರಿ. ಶುಭದಿನ 24. ಲಿಂಗಾಷ್ಟಕ ಪಠಣ ಮಾಡಿರಿ.




ಸ್ವಂತ ಕಟ್ಟಡ ಇರುವಂಥವರು ಅಲ್ಲಿ ಕೆಲವು ವ್ಯವಸ್ಥೆಗಳನ್ನು ಬದಲಾವಣೆ ಮಾಡಲು ಮುಂದಾಗುತ್ತೀರಿ. ನಿಮ್ಮಲ್ಲಿ ಕೆಲವರಿಗೆ ಏಕತಾನತೆ ಕಾಡಬಹುದು. ಇನ್ನೂ ಕೆಲವರು ಯಾರ ಮಾತೂ ಕೂಡ ಕೇಳದಂತಹ ಮನಸ್ಥಿತಿಯಲ್ಲಿರುತ್ತೀರಿ. ಉದ್ಯೋಗ ಹಾಗೂ ವ್ಯಾಪಾರ ಕ್ಷೇತ್ರದಲ್ಲಿ ಇರುವವರಿಗೆ ಸಕಾರಾತ್ಮಕ ವಾತಾವರಣ ಇರುತ್ತದೆ. ಶುಭದಿನ 28. ಸಂಕಷ್ಟಹರ ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಉದ್ಯಮಿಗಳು ವ್ಯಾಪಾರಸ್ಥರಿಗೆ ಉತ್ತಮವಾದ ಸಮಯ. ನೆರೆಹೊರೆಯವರ ಜತೆಗೆ ಉತ್ತಮ ಬಾಂಧವ್ಯ ದೊರೆಯಲಿದೆ. ಮೇಲಿಂದ ಮೇಲೆ ಕೌಟುಂಬಿಕ ಸಮಸ್ಯೆಗಳು ನಿಮ್ಮನ್ನು ಕಾಡಲಿವೆ. ಮಾನಸಿಕ ಕ್ಷೋಭೆ ನಿಮ್ಮನ್ನು ಕಾಡುತ್ತದೆ. ಉದ್ಯಮಿಗಳು ವ್ಯಾಪಾರಸ್ಥರಿಗೆ ಉತ್ತಮವಾದ ಸಮಯ ಇದು. ವೈಯಕ್ತಿಕ ಸಂಬಂಧವು ಉತ್ತಮವಾಗಿರುತ್ತದೆ. ಶುಭದಿನ 26. ದೇವ್ಯಪರಾದ ಕ್ಷಮಾಪನ ಸ್ತೋತ್ರ ಪಠಿಸಿರಿ.




ಕೆಲಸವನ್ನು ಪರಿಶೀಲಿಸಲು ಸಮಯ ಮೀಸಲಿಡುತ್ತೀರಿ. ನಿಮಗೆ ತುರ್ತಾಗಿ ಆಗಬೇಕಾದ ಕೆಲಸವೊಂದನ್ನು ಯಾರು ವೇಗವಾಗಿ ಹಾಗೂ ಗುಣಮಟ್ಟದ ಜತೆಗೆ ಪೂರ್ಣಗೊಳಿಸುತ್ತಾರೆ ಎಂಬ ಬಗ್ಗೆ ಆಲೋಚನೆ ಮಾಡುತ್ತೀರಿ. ಯಾವುದಕ್ಕೂ ಹಿರಿಯ ಅಧಿಕಾರಿಗಳ ಸಲಹೆಯನ್ನೂ ಪಡೆಯೋಣ ಎಂದು ನಿಮಗೆ ಈ ಸಮಯದಲ್ಲಿ ಅನಿಸುತ್ತದೆ. ಶುಭದಿನ 28. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ದೈನಂದಿನ ಕಾರ್ಯ ಕಲಾಪಗಳಲ್ಲೇ ಉತ್ಸಾಹಕರವಾದ ಬದಲಾವಣೆ ಕಾಣಿಸಿಕೊಳ್ಳುತ್ತದೆ. ಆರಾಮವಾಗಿ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವುದು ಹೇಗೆ ಎಂಬ ವಿಚಾರ ನಿಮಗೆ ತಿಳಿಯುತ್ತದೆ. ಇದೆಲ್ಲದರ ಪರಿಣಾಮವಾಗಿ ಆರೋಗ್ಯ ಉತ್ತಮವಾಗಿರುತ್ತದೆ. ನಿಮಗೆ ವೈಯಕ್ತಿಕವಾಗಿ ಇದ್ದ ಗುರಿಗಳ ಪೈಕಿ ಒಂದೊಂದಾಗಿ ಪೂರ್ತಿಗೊಳಿಸುತ್ತೀರಿ. ಶುಭದಿನ 25. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವೈವಾಹಿಕ ಜೀವನದಲ್ಲಿ ಅಸಮಾಧಾನ ಕಾಣಿಸಿಕೊಳ್ಳುತ್ತದೆ. ಇದೇ ನಿಮ್ಮ ಸಮಸ್ಯೆಗೆ ಕಾರಣವಾಗುತ್ತದೆ. ನಿಮಗೆ ವಹಿಸಿದ ಕೆಲಸಗಳನ್ನು ನಿರ್ದಿಷ್ಟ ಅವಧಿಯೊಳಗೆ ಪೂರ್ಣಗೊಳಿಸುವಲ್ಲಿ ಸಫಲರಾಗುತ್ತೀರಿ. ವಾರದ ಮಧ್ಯಭಾಗದಲ್ಲಿ ವೈವಾಹಿಕ ಜೀವನದಲ್ಲಿ ಸಾಮರಸ್ಯ ಮೂಡಲು ಅವಕಾಶಗಳು ಸಿಗಲಿವೆ. ನಿಮ್ಮ ಉತ್ಸಾಹ ಹಾಗೂ ಚೈತನ್ಯ ಕೂಡ ಹೆಚ್ಚಾಗಲಿದೆ. ಶುಭದಿನ 26. ವಿಷ್ಣು ಸಹಸ್ರನಾಮ ಪಠಿಸಿರಿ.




ಸಾಹಿತ್ಯ ಹಾಗೂ ಕನ್ಸಲ್ಟೆನ್ಸಿ ಕ್ಷೇತ್ರದಲ್ಲಿ ಇರುವವರಿಗೆ ಪ್ರಗತಿ ಇದೆ. ನಿಮ್ಮೊಳಗಿನ ತಾಜಾತನವನ್ನು ಹಾಗೇ ಉಳಿಸಿಕೊಳ್ಳಲು ನೆರವಾಗುತ್ತದೆ. ಆದಾಯ ಮೂಲದಿಂದ ಹೆಚ್ಚುವರಿಯಾಗಿ ಅನುಕೂಲ ಪಡೆಯಲಿದ್ದೀರಿ. ವೈಯಕ್ತಿಕ ಸಂಬಂಧಗಳು ಸುಮಧುರವಾಗಿ ಇರುತ್ತವೆ. ಇದರಿಂದ ನಿಮ್ಮ ಸಂತೋಷ ಹೆಚ್ಚಾಗಲಿದೆ. ಖರ್ಚು ವೆಚ್ಚಗಳು ಚಿಂತೆಗೆ ಕಾರಣ ಆಗಲಿದೆ. ಶುಭದಿನ 27. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ವಹಿಸಿಕೊಂಡ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸುತ್ತೀರಿ. ಇದರಿಂದ ನಿಮ್ಮ ವರ್ಚಸ್ಸು ಹೆಚ್ಚಾಗಲಿದೆ. ಮೆಚ್ಚುಗೆಯ ಮಾತುಗಳಿಂದ ಸಂತೋಷ ಉಂಟಾಗುತ್ತದೆ. ಆರೋಗ್ಯವು ಉತ್ತಮವಾಗಿರುತ್ತದೆ. ಈ ಸಮಯದಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದರಿಂದ ಸಕಾರಾತ್ಮಕ ಯೋಚನೆ ನಿಮ್ಮಲ್ಲಿ ಮೂಡುತ್ತದೆ. ಮಾನಸಿಕವಾಗಿ ಬಹಳ ನೊಂದುಕೊಳ್ಳುತ್ತೀರಿ. ಶುಭದಿನ 23. ಹನುಮಾನ್ ಚಾಲೀಸ್ ಓದಿರಿ.